
Plastic Muktha Karnataka
ಪ್ಲಾಸ್ಟಿಕ್ ಮುಕ್ತ ಕರ್ನಾಟಕ

# Why Plastic Ban?
# ಪ್ಲಾಸ್ಟಿಕ್ ನಿಷೇಧ ಏಕೆ?



# Why is Plastic BAD?
## ಪ್ಲಾಸ್ಟಿಕ್ ಏಕೆ ಕೆಟ್ಟದ್ದು (ಕಳಪೆ)?

Plastic uses natural resources to produce & to recycle (downcycle). Many used only once for a few minutes.

ಪಾಸ್ಟಿಕ್ ಉತ್ಪಾದಿಸಲು ಮತ್ತು ಮರುಬಳಕೆ ಮಾಡಲು ಪರಿಸರದಲ್ಲಿ ಒದಗುವ ಅನೇಕ ನೈಸರ್ಗಿಕ ಸಂಪನ್ಮೂಲಗಳನ್ನು ಉಪಯೋಗಿಸಿಕೊಂಡು ಪ್ಲಾಸ್ಟಿಕ್ ತಯಾರಿಸುತ್ತೇವೆ. ಆದರೆ ಪ್ಲಾಸ್ಟಿಕ್ ಅನ್ನು ಅನೇಕರು ಒಂದು ಬಾರಿ ಕೆಲವು ನಿಮಿಷಗಳಿಗೆ ಮಾತ್ರ ಬಳಸಿ ಎಸೆಯುತ್ತಾರೆ.

### Bad for Environment: ಪರಿಸರಕ್ಕೆ ಹಾನಿಕರಕ

**Pollutes land :** does not decompose, trash forever

ಭೂ ಮಾಲಿನ್ಯ: ಪ್ಲಾಸ್ಟಿಕ್ ಕೊಳೆಯುವುದಿಲ್ಲ, ಶಾಶ್ವತವಾಗಿ ಅನುಪಯುಕ್ತವಾಗುತ್ತದೆ

**Pollutes air**: when burnt releases cancerous dioxins

ವಾಯು ಮಾಲಿನ್ಯ: ಪ್ಲಾಸ್ಟಿಕ್ ಸುಟ್ಟಾಗ ಕ್ಯಾನ್ಸರ್ ಕಾಯಿಲೆಗೆ ಸಂಬಂಧಿಸಿದ ಡೈಆಕ್ಸಿನ್ ಅನಿಲಗಳು ಬಿಡುಗಡೆಯಾಗುತ್ತವೆ.

**Pollutes water:** plastic ash pollutes ground water, Chokes animals feeding on garbage like cows, dogs, pigs, birds etc., Chokes drains

**ಜಲ ಮಾಲಿನ್ಯ:** ಸುಟ್ಟ ಪ್ಲಾಸ್ಟಿಕ್ ಬೂದಿ ನೀರವಾಗಿ ಅಂತರ್ಜಲಕ್ಕೆ ಸೇರಿ ಜಲ ಮೂಲಗಳನ್ನು ಮಾಲಿನ್ಯ ಮಾಡುತ್ತದೆ. ಆಗೆಯೇ ಹಸು, ನಾಯಿ, ಹಂದಿಗಳು, ಪಕ್ಷಿ ಇತ್ಯಾದಿ ರೀತಿಯ ಕಸ ತಿನ್ನುವ ಪ್ರಾಣಿಗಳು ಉಸಿರುಗಟ್ಟಿ ಸಾಯುತ್ತವೆ. ಒಳಚರಂಡಿಗಳ ಹರಿವಿಗೆ ಅಡ್ಡಿಯನ್ನುಂಟು ಮಾಡುತ್ತದೆ.

**Bad for health :** **ಆರೋಗ್ಯಕ್ಕೆ ಹಾನಿಕರಕ:**

Hot liquid + plastic glass = cancer

Inhale cancerous dioxins when plastic-laden trash is burnt in nearby locality

ಬಿಸಿ ದ್ರವ + ಪ್ಲಾಸ್ಟಿಕ್ ಗಾಜು = ಕ್ಯಾನ್ಸರ್

ಪ್ಲಾಸ್ಟಿಕ್ ಕಸದ ರಾಶಿಯನ್ನು ವಸತಿ ಪ್ರದೇಶದ ಬಳಿಯಲ್ಲಿ ಸುಟ್ಟಾಗ ಕ್ಯಾನ್ಸರ್ ಕಾಯಿಲೆಗೆ ಸಂಬಂಧಿಸಿದ ಡೈಆಕ್ಸಿನ್ ಅನಿಲಗಳು ಬಿಡುಗಡೆಗೊಂಡು ಆ ಸ್ಥಳದ ಸ್ಥಳೀಯ ಜನರು ಮತ್ತು ಪ್ರಾಣಿ ಪಕ್ಷಿಗಳಿಗೆ ಉಸಿರಾಟದ ಸಮಸ್ಯೆಗಳು ಉಲ್ಬಣಗೊಳ್ಳುತ್ತವೆ.

# What harm can a disposable plastic bag do?
# ಎಸೆದ ಒಂದು ಪ್ಲಾಸ್ಟಿಕ್ ಚೀಲ ಏನು ಹಾನಿ ಮಾಡಬಹುದು?




Bad for environment, Bad for he
ಸರ ಮತ್ತು ಆರೋಗ್ಯಕ್ಕೆ ಹಾನಿಕಾರ

RNI No. KARBIL/2001/47147

# ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

## ವಿಶೇಷ ರಾಜ್ಯ ಪತ್ರಿಕೆ

| ಭಾಗ - IVA | ಬೆಂಗಳೂರು, ಶುಕ್ರವಾರ, ಮಾರ್ಚ್ ೧೧, ೨೦೧೬ (ಫಾಲ್ಗುಣ ೨೧, ಶಕ ವರ್ಷ ೧೯೩೭) | ನಂ ೩೭೩ |
|---|---|---|
| Part - IVA | Bengaluru, Friday, March 11, 2016 (Palguna 21, Shaka Varsha 1937) | No. 373 |


ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವಾಲಯ

### ಅಧಿಸೂಚನೆ

ಸಂಖ್ಯೆ: ಅಪಜೀ 17 ಇಪಿಸಿ 2012, ಬೆಂಗಳೂರು, ದಿನಾಂಕ: 11.03.2016.

ಪ್ಲಾಸ್ಟಿಕ್ ಕ್ಯಾರಿಬ್ಯಾಗ್‌ಗಳು ಹಾಗೂ ದೈನಂದಿನ ಬಳಕೆಯಲ್ಲಿರುವ ಇತರೆ ಪ್ಲಾಸ್ಟಿಕ್ ವಸ್ತುಗಳು ಅಲ್ಪಾವಧಿ ಹಾಗೂ ದೀರ್ಘಾವಧಿಯಲ್ಲಿ ಪರಿಸರಕ್ಕೆ ಹಾನಿಯನ್ನು ಮತ್ತು ಆರೋಗ್ಯಕ್ಕೆ ಅಪಾಯವನ್ನು ಉಂಟುಮಾಡಲು ಕಾರಣವಾಗಿರುತ್ತದೆ.

ಭಾರತದ ಸಂವಿಧಾನದ ಕಲಂ-48ಎ ಅನ್ವಯ, ಪ್ರತಿ ರಾಜ್ಯ ಸರ್ಕಾರವೂ ಪರಿಸರದ ಮಟ್ಟವನ್ನು ಉತ್ತಮಪಡಿಸುವ ಜವಾಬ್ದಾರಿಯನ್ನು ಹೊಂದಿರುತ್ತದೆ.

ಪ್ಲಾಸ್ಟಿಕ್ ಕ್ಯಾರಿಬ್ಯಾಗ್, ಪ್ಲಾಸ್ಟಿಕ್ ಭಿತ್ತಿಪತ್ರ, ಪ್ಲಾಸ್ಟಿಕ್ ತೋರಣ, ಫ್ಲೆಕ್ಸ್, ಬಾವುಟ, ಪ್ಲಾಸ್ಟಿಕ್ ತಟ್ಟೆ, ಪ್ಲಾಸ್ಟಿಕ್ ಲೋಟ, ಪ್ಲಾಸ್ಟಿಕ್ ಚಮಚಗಳು, ಕ್ಲಿಂಗ್ ಫಿಲ್ಮ್ ಮತ್ತು ಊಟದ ಮೇಜಿನ ಮೇಲೆ ಹರಡುವ ಪ್ಲಾಸ್ಟಿಕ್ ಹಾಳೆಗಳು ಮತ್ತು ಥರ್ಮೋಕೋಲ್‌ನಿಂದ ತಯಾರಾದ ವಸ್ತುಗಳ ವ್ಯಾಪಕ ಬಳಕೆಯಿಂದಾಗಿ ಪರಿಸರಕ್ಕೆ ಹಾನಿ ಹಾಗೂ ಮಾನವ ಮತ್ತಿತರ ಪ್ರಾಣಿಗಳ ಆರೋಗ್ಯಕ್ಕೆ ಅಪಾಯ ಉಂಟಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ.

ಪ್ಲಾಸ್ಟಿಕ್ ತ್ಯಾಜ್ಯಗಳು ಚರಂಡಿಗಳ, ಮೋರಿಗಳ ಮತ್ತು ಒಳಚರಂಡಿಗಳ ಸರಾಗ ಹರಿವಿಗೆ ತಡೆಯನ್ನು ಉಂಟುಮಾಡುವುದರ ಜೊತೆಗೆ ನಗರ ಪ್ರದೇಶಗಳಲ್ಲಿನ ಜಲಕಾಯಗಳ ಮಾಲಿನ್ಯಕ್ಕೆ ಕಾರಣವಾಗುತ್ತಿರುವುದನ್ನು ಗಮನಿಸಲಾಗಿದೆ.

ಆದುದರಿಂದ, ಇಂತಹ ಸಮಸ್ಯೆಗಳು ಪುನರಾವರ್ತನೆಯಾಗದಂತೆ ಪರಿಣಾಮಕಾರಿಯಾಗಿ ತಡೆಯುವ ದೃಷ್ಟಿಯಿಂದ, ರಾಜ್ಯ ಸರ್ಕಾರಕ್ಕೆ ಪ್ರದತ್ತವಾಗಿರುವ ಪರಿಸರ (ಸಂರಕ್ಷಣೆ) ಕಾಯಿದೆ 1986ರ ಸೆಕ್ಷನ್ 5ರಲ್ಲಿನ ಅಧಿಕಾರವನ್ನು ಚಲಾಯಿಸಿ ಪ್ಲಾಸ್ಟಿಕ್ ಕ್ಯಾರಿಬ್ಯಾಗ್, ಪ್ಲಾಸ್ಟಿಕ್ ಭಿತ್ತಿಪತ್ರ, ಪ್ಲಾಸ್ಟಿಕ್ ತೋರಣ, ಫ್ಲೆಕ್ಸ್, ಬಾವುಟ, ಪ್ಲಾಸ್ಟಿಕ್ ತಟ್ಟೆ, ಪ್ಲಾಸ್ಟಿಕ್ ಲೋಟ, ಪ್ಲಾಸ್ಟಿಕ್ ಚಮಚ, ಕ್ಲಿಂಗ್ ಫಿಲ್ಮ್ ಮತ್ತು ಊಟದ ಮೇಜಿನ ಮೇಲೆ ಹರಡುವ ಪ್ಲಾಸ್ಟಿಕ್ ಹಾಳೆ ಹಾಗೂ ಥರ್ಮೋಕೋಲ್ ಮತ್ತು ಪ್ಲಾಸ್ಟಿಕ್ ಮೈಕ್ರೋ ಬೀಡ್ಸ್‌ನಿಂದ ತಯಾರಾದಂತಹ ಮೇಲ್ಕಂಡ ವಸ್ತುಗಳ ತಯಾರಿಕೆ, ಸರಬರಾಜು ಮತ್ತು ಬಳಕೆಯನ್ನು ನಿಷೇಧಿಸಿ ಸರ್ಕಾರ ಈ ಕೆಳಗಿನ ನಿರ್ದೇಶನವನ್ನು ಹೊರಡಿಸಿದೆ. ಈ ಅಧಿಸೂಚನೆ ರಾಜ್ಯಪತ್ರದಲ್ಲಿ ಪ್ರಕಟಗೊಂಡ ದಿನಾಂಕದಿಂದ ಜಾರಿಗೆ ಬರುತ್ತದೆ.

### ನಿರ್ದೇಶನ

1. ಯಾವುದೇ ವ್ಯಕ್ತಿ, ಅಂಗಡಿ ಮಾಲೀಕ, ಮಾರಾಟಗಾರ, ಸಗಟುಮಾರಾಟಗಾರ ಅಥವಾ ಚಿಲ್ಲರೆವ್ಯಾಪಾರಿ, ವ್ಯಾಪಾರಿ ಮತ್ತು ಮಾರಾಟಗಾರರು, ಯಾವುದೇ ದಪ್ಪದ ಯಾವುದೇ ರೀತಿಯ ಪ್ಲಾಸ್ಟಿಕ್ ಕ್ಯಾರಿಬ್ಯಾಗ್, ಪ್ಲಾಸ್ಟಿಕ್ ಭಿತ್ತಿಪತ್ರ, ಪ್ಲಾಸ್ಟಿಕ್ ತೋರಣ, ಫ್ಲೆಕ್ಸ್, ಪ್ಲಾಸ್ಟಿಕ್ ಬಾವುಟ, ಪ್ಲಾಸ್ಟಿಕ್ ತಟ್ಟೆ, ಪ್ಲಾಸ್ಟಿಕ್ ಲೋಟ, ಪ್ಲಾಸ್ಟಿಕ್ ಚಮಚ, ಕ್ಲಿಂಗ್ ಫಿಲ್ಮ್ ಮತ್ತು ಊಟದ ಮೇಜಿನ ಮೇಲೆ ಹರಡುವ ಪ್ಲಾಸ್ಟಿಕ್ ಹಾಳೆ ಹಾಗೂ ಥರ್ಮೋಕೋಲ್ ಮತ್ತು ಪ್ಲಾಸ್ಟಿಕ್ ಮೈಕ್ರೋ ಬೀಡ್ಸ್‌ನಿಂದ ತಯಾರಾದಂತಹ ಮೇಲ್ಕಂಡ ವಸ್ತುಗಳ ಬಳಕೆಯನ್ನು ರಾಜ್ಯದಾದ್ಯಂತ ನಿಷೇಧಿಸಲಾಗಿದೆ. ಮುಂದುವರೆದು, ಯಾವುದೇ ಕೈಗಾರಿಕೆ ಅಥವಾ ವ್ಯಕ್ತಿ ಯಾವುದೇ ದಪ್ಪದ ಯಾವುದೇ ರೀತಿಯ ಪ್ಲಾಸ್ಟಿಕ್ ಕ್ಯಾರಿಬ್ಯಾಗ್, ಪ್ಲಾಸ್ಟಿಕ್ ಭಿತ್ತಿಪತ್ರ, ಪ್ಲಾಸ್ಟಿಕ್ ತೋರಣ, ಫ್ಲೆಕ್ಸ್, ಪ್ಲಾಸ್ಟಿಕ್

ಬಾವುಟ, ಪ್ಲಾಸ್ಟಿಕ್ ತಟ್ಟೆ, ಪ್ಲಾಸ್ಟಿಕ್ ಲೋಟ, ಪ್ಲಾಸ್ಟಿಕ್ ಚಮಚ, ಕ್ಲಿಂಗ್ ಫಿಲ್ಮ್ಸ್ ಮತ್ತು ಊಟದ ಮೇಜಿನ ಮೇಲೆ ಹರಡುವ ಪ್ಲಾಸ್ಟಿಕ್ ಹಾಳೆ ಹಾಗೂ ಥರ್ಮೋಕೋಲ್ ಮತ್ತು ಪ್ಲಾಸ್ಟಿಕ್ ಮೈಕ್ರೋ ಬೀಡ್ಸ್‌ನಿಂದ ತಯಾರಾದಂತಹ ಮೇಲ್ಕಂಡ ವಸ್ತುಗಳ ತಯಾರಿಕೆ, ಸರಬರಾಜು, ಸಂಗ್ರಹಣೆ, ಸಾಗಾಣಿಕೆ, ಮಾರಾಟ ಮತ್ತು ವಿತರಣೆ ಮಾಡುವುದನ್ನು ರಾಜ್ಯಾದ್ಯಂತ ನಿಷೇಧಿಸಿದೆ.

ಪರಂತು, ಈ ಕೆಳಕಂಡ ಸಂದರ್ಭ ಮತ್ತು ಚಟುವಟಿಕೆಗಳಿಗೆ ಬಳಸುವ ಪ್ಲಾಸ್ಟಿಕ್ ವಸ್ತುಗಳಿಗೆ ಈ ಅಧಿಸೂಚನೆಯಿಂದ ವಿನಾಯಿತಿ ನೀಡಲಾಗಿದೆ.

ಅ) ವಿಶೇಷ ಆರ್ಥಿಕ ವಲಯ (SEZ) ಮತ್ತು ರಫ್ತು ಉದ್ದೇಶಿತ ಘಟಕಗಳಲ್ಲಿ (EOU) ಸ್ಥಾಪಿತವಾದ ಪ್ಲಾಸ್ಟಿಕ್ ಉದ್ಯಮದಲ್ಲಿ ರಫ್ತು ಮಾಡುವ ಉದ್ದೇಶಕ್ಕೆಂದು ಪ್ರತ್ಯೇಕವಾಗಿ ಹಾಗೂ ರಫ್ತು ಆರ್ಡರ್ ಮೇರೆಗೆ ಉತ್ಪಾದಿಸಲ್ಪಡುವ ಪ್ಲಾಸ್ಟಿಕ್ ವಸ್ತುಗಳು.

ಆ) ಸಾಮಗ್ರಿಗಳನ್ನು ಬಳಸುವುದಕ್ಕೆ ಮೊದಲು ಉತ್ಪಾದನಾ/ಸಂಸ್ಕರಣಾ ಘಟಕಗಳಲ್ಲಿ ಪ್ಯಾಕ್ ಮಾಡಿ ಸೀಲ್ ಮಾಡಲು ಬಳಸುವ ಹಾಗೂ ಸಾಮಗ್ರಿಗಳ ಪ್ಯಾಕೇಜಿಂಗ್ ಮಾಡುವ ಸಂದರ್ಭದಲ್ಲಿ ಅವಿಭಾಜ್ಯವಾಗಿ ಉಪಯೋಗಿಸುವ ಪ್ಲಾಸ್ಟಿಕ್ ಬ್ಯಾಗ್‌ಗಳು.

ಇ) ಸರ್ಕಾರಿ ಇಲಾಖೆಗಳಿಂದ ಅಥವಾ ಇತರೆ ಸಂಬಂಧಪಟ್ಟ ಸಂಸ್ಥೆಗಳಿಂದ ಸ್ವೀಕೃತವಾದ ಆರ್ಡರ್‌ಗೆ ಎದುರಾಗಿ ಅರಣ್ಯ ಮತ್ತು ತೋಟಗಾರಿಕೆ ನರ್ಸರಿಗಳಲ್ಲಿ ಬಳಸುವ ಪ್ಲಾಸ್ಟಿಕ್ ಚೀಲಗಳು ಹಾಗೂ ಹಾಳೆಗಳು.

ಈ) ಹಾಲು ಮತ್ತು ಹಾಲು ಉತ್ಪನ್ನಗಳ (ಹೈನು ಉತ್ಪನ್ನಗಳು) ಪ್ಯಾಕಿಂಗ್‌ಗೆ ಬಳಸುವ ಪ್ಲಾಸ್ಟಿಕ್‌ಗಳು.

2. ಈ ನಿರ್ದೇಶನವನ್ನು ಕೆಳಗೆ ಪಟ್ಟಿಮಾಡಿರುವ ಅಧಿಕಾರಿಗಳು ಆಯಾ ಹುದ್ದೆಗಳಿಗೆ ನಿಯಮಾನುಸಾರ ಪ್ರದತ್ತವಾಗಿರುವ ಅಧಿಕಾರದಂತೆ ಅವರವರ ಕಾರ್ಯವ್ಯಾಪ್ತಿಯಲ್ಲಿ ಜಾರಿಗೊಳಿಸಬಹುದಾಗಿರುತ್ತದೆ:

ಅ. ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಆಯುಕ್ತರು, ಜಂಟಿ ಆಯುಕ್ತರುಗಳು, ಕಂದಾಯ ಅಧಿಕಾರಿಗಳು, ಪಾಲಿಕೆಯ ಎಲ್ಲಾ ಸಾರ್ವಜನಿಕ ಆರೋಗ್ಯಾಧಿಕಾರಿಗಳು ಮತ್ತು ಎಲ್ಲಾ ಅಭಿಯಂತರರು.

ಆ. ಎಲ್ಲಾ ಜಿಲ್ಲೆಗಳ ಜಿಲ್ಲಾಧಿಕಾರಿಗಳು.

ಇ. ರಾಜ್ಯದ ಎಲ್ಲಾ ನಗರ ಸಭೆ ಆಯುಕ್ತರು, ಮುಖ್ಯಾಧಿಕಾರಿಗಳು, ನಗರ ಸಭೆ ಆರೋಗ್ಯಾಧಿಕಾರಿಗಳು ಮತ್ತು ಎಲ್ಲಾ ಅಭಿಯಂತರರು.

ಈ. ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ಸಹಾಯಕ ಪರಿಸರ ಅಧಿಕಾರಿ, ಉಪ ಪರಿಸರ ಅಧಿಕಾರಿ, ಪರಿಸರ ಅಧಿಕಾರಿ ಮತ್ತು ಹಿರಿಯ ಪರಿಸರ ಅಧಿಕಾರಿಗಳು.

ಉ. ಕಂದಾಯ ಉಪ ವಿಭಾಗದ ಎಲ್ಲಾ ಸಹಾಯಕ ಆಯುಕ್ತರುಗಳು.

ಊ. ಎಲ್ಲಾ ತಾಲ್ಲೂಕುಗಳ ತಹಶೀಲ್ದಾರರು.

ಋ. ವಾಣಿಜ್ಯ ತೆರಿಗೆ ಇಲಾಖೆಯ ಎಲ್ಲಾ ಅಧಿಕಾರಿಗಳು.

ಎ. ಆಹಾರ ಮತ್ತು ನಾಗರೀಕ ಪೂರೈಕೆ ಇಲಾಖೆಯ ಎಲ್ಲಾ ಅಧಿಕಾರಿಗಳು.

ಏ. ತೂಕ ಮಾಪನ ಮತ್ತು ಅಳತೆ ಇಲಾಖೆಯ ನಿಯಂತ್ರಕರು, ಉಪ ನಿಯಂತ್ರಕರು, ಪ್ರಾದೇಶಿಕ ಅಧಿಕಾರಿಗಳು.

3. ಈ ನಿರ್ದೇಶನವನ್ನು ಉಲ್ಲಂಘಿಸಿದ ಸಂದರ್ಭದಲ್ಲಿ ಕೆಳಕಂಡ ಅಧಿಕಾರಿಗಳು ಅಪರಾಧದ ಸ್ವರೂಪಕ್ಕೆ ಅನುಗುಣವಾಗಿ ಪರಿಸರ (ಸಂರಕ್ಷಣೆ) ಕಾಯಿದೆ, 1986ರ ಸೆಕ್ಷನ್ 19ರ ಅನ್ವಯ ಪ್ರದತ್ತವಾಗಿರುವ ಅಧಿಕಾರದಂತೆ ಈ ಅಧಿಸೂಚನೆಯನ್ನು ಉಲ್ಲಂಘಿಸಿದವರ ಮೇಲೆ ಆಯಾ ವ್ಯಾಪ್ತಿಯಲ್ಲಿ ಬರುವ ನ್ಯಾಯಾಲಯದಲ್ಲಿ ಮೊಕದ್ದಮೆಯನ್ನು ಹೂಡಲು ಕ್ರಮ ಜರುಗಿಸುವುದು.

ಅ. ಸರ್ಕಾರದ ಕಾರ್ಯದರ್ಶಿ (ಪರಿಸರ ಮತ್ತು ಜೀವಿಶಾಸ್ತ್ರ) ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ.

ಆ. ಎಲ್ಲಾ ಜಿಲ್ಲೆಗಳ ಜಿಲ್ಲಾಧಿಕಾರಿಗಳು

ಇ. ಕಂದಾಯ ಇಲಾಖೆಯ ಎಲ್ಲಾ ಸಹಾಯಕ ಆಯುಕ್ತರುಗಳು.

ಈ. ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ಅಧ್ಯಕ್ಷರು ಮತ್ತು ಸದಸ್ಯ ಕಾರ್ಯದರ್ಶಿಗಳು.

ಉ. ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ಎಲ್ಲಾ ಪ್ರಾದೇಶಿಕ ಪರಿಸರ ಅಧಿಕಾರಿಗಳು.

ವಿವರಣೆ 1 – "ಪ್ಲಾಸ್ಟಿಕ್" ಎಂದರೆ ಪಾಲಿ ಪ್ರೊಪ್ಲೈಲಿನ್ (PP), ನಾನ್-ಓವನ್ ಪಾಲಿ ಪ್ರೊಪ್ಲೈಲಿನ್, ಮಲ್ಟಿ ಲೇಯರ್ಡ್ ಕೊ-ಎಕ್ಸ್‌ಟ್ರೂಡರ್ ಪಾಲಿ ಪ್ರೊಪ್ಲೈಲಿನ್, ಪಾಲಿ ಇತಲಿನ್ (PE), ಪಾಲಿ ವಿನ್ಯೆಲ್ ಕ್ಲೋರೈಡ್ (PVC), ಹೈ ಮತ್ತು ಲೋ ಡೆನ್ಸಿಟಿ ಪಾಲಿ ಇತಲಿನ್ (HDPE & LDPE), ಥರ್ಮೋಕೋಲ್ ಎಂದು ಕರೆಯಲ್ಪಡುವ ಪಾಲಿ ಸ್ಟಿರಿನ್ (PS), ಪಾಲಿ

ಅಮೈಡ್ಸ್ (ನೈಲಾನ್), ಪಾಲಿ ಟೆರೆಫ್ಥಲೇಟ್ (PT), ಪಾಲಿ ಮೀಥೈಲ್ ಮೆಥಕ್ರಿಲೇಟ್ (PMM) ಮತ್ತು ಪ್ಲಾಸ್ಟಿಕ್ ಮೈಕ್ರೊ ಬೀಡ್ಸ್‌ಗಳಿಂದ ತಯಾರಾದ ಈ ನಿರ್ದೇಶನದಲ್ಲಿ ಹೆಸರಿಸಲ್ಪಟ್ಟಿರುವ ಎಲ್ಲಾ ವಸ್ತುಗಳು.

**ವಿವರಣೆ 2** – "ಕ್ಯಾರಿಬ್ಯಾಗ್" ಎಂಬ ಶಬ್ದಕ್ಕೆ ಪ್ಲಾಸ್ಟಿಕ್ ತ್ಯಾಜ್ಯ (ನಿರ್ವಹಣೆ ಮತ್ತು ನಿಭಾವಣೆ) ನಿಯಮಗಳು 2011ರ ನಿಯಮ 3 (ಬಿ)ರಲ್ಲಿ ನೀಡಿರುವ ವ್ಯಾಖ್ಯಾನವನ್ನು ಯಥಾವತ್ತಾಗಿ ಬಳಸುವುದು. ಈ ವ್ಯಾಖ್ಯಾನದಲ್ಲಿ ಯಾವುದೇ ಸಾಮಗ್ರಿಗಳನ್ನು ಬಳಸುವುದಕ್ಕೆ ಮೊದಲು ಪ್ಯಾಕ್ ಮಾಡಿ ಸೀಲ್ ಮಾಡಿರುವ ಪ್ಯಾಕೇಜಿಂಗ್ ಪ್ಲಾಸ್ಟಿಕ್‌ಗಳು ಸೇರಿರುವುದಿಲ್ಲ.

**ವಿವರಣೆ 3** – ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು ಪ್ಲಾಸ್ಟಿಕ್ ತ್ಯಾಜ್ಯ (ನಿರ್ವಹಣೆ ಮತ್ತು ನಿಭಾವಣೆ) ನಿಯಮಗಳು 2011ರ ನಿಯಮ(4)ರ ಷರತ್ತು (ಎ) ನಲ್ಲಿ ಪಟ್ಟಿಮಾಡಲಾಗಿರುವ ಕಾರ್ಯಗಳನ್ನು ಜಾರಿಗೊಳಿಸುವ ಅಧಿಕಾರವನ್ನು ಹೊಂದಿದ್ದು ಇನ್ನುಳಿದ ಸ್ಥಳೀಯ ಸಂಸ್ಥೆಗಳು ನಿಯಮ (4)ರ ಷರತ್ತು (ಬಿ)ನಲ್ಲಿ ಪಟ್ಟಿಮಾಡಲಾಗಿರುವ ಕಾರ್ಯಗಳನ್ನು ನಿರ್ವಹಿಸುವ ಅಧಿಕಾರವನ್ನು ಹೊಂದಿರುತ್ತವೆ.

**ವಿವರಣೆ 4** – ಭಾರತ ಸರ್ಕಾರವು ಹೊರಡಿಸಿರುವ ಅಧಿಸೂಚನೆ ಸಂ:ಎಸ್.ಓ.394(ಇ), ದಿನಾಂಕ:16.04.1987ರಲ್ಲಿ ಹಾಗೂ ಕಾಲಕಾಲಕ್ಕೆ ಆಗುವ ತಿದ್ದುಪಡಿಗಳ ಅನುಸಾರ ಪಟ್ಟಿಮಾಡಲಾಗಿರುವ ಎಲ್ಲಾ ಅಧಿಕಾರಿಗಳು ಈ ಅಧಿಸೂಚನೆಯನ್ನು ಉಲ್ಲಂಘಿಸಿದವರ ವಿರುದ್ಧ ಸಂಬಂಧಪಟ್ಟ ನ್ಯಾಯಾಲಯದಲ್ಲಿ ಪರಿಸರ (ಸಂರಕ್ಷಣೆ) ಕಾಯಿದೆ, 1986ರ ಸೆಕ್ಷನ್ 19ರಡಿ ದೂರುಗಳನ್ನು ದಾಖಲಿಸುವ ಅಧಿಕಾರವನ್ನು ಹೊಂದಿರುತ್ತಾರೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

**ಮಹೇಂದ್ರ ಜೈನ್**
ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ
ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ.

## FOREST, ECOLOGY AND ENVIRONMENT SECRETARIAT

## NOTIFICATION

**No. FEE 17 EPC 2012, Bangalore, Dated: 11.03.2016**

Whereas, plastic carry bags and other plastic items used in daily life cause short term and long term environmental damage and health hazard;

And whereas, Article 48-A of the Constitution of India, inter alia, envisages that the State shall endeavor to protect and improve the environment;

And whereas, it has come to the knowledge of the Government that, the use of plastic carry bags, banners, buntings, flex, plastic flags, plastic plates, plastic cups, plastic spoons, cling films and plastic sheets used for spreading on dining table and items that are made of thermocol are causing serious environmental hazards and affects health of human beings as well as animals;

And whereas, it is observed that the plastic wastes is also causing blockage of gutters, sewers and drains apart from resulting in pollution of water bodies in urban areas;

And whereas, with a view to prevent the recurrence of such problems, the State Government in exercise of the powers conferred under Section 5 of the Environment (Protection) Act, 1986, issues the following directions imposing ban on manufacture, supply, sale and use of plastic carry bags, plastic banners, plastic buntings, flex, plastic flags, plastic plates, plastic cups, plastic spoons, cling films and plastic sheets used for spreading on dining table including the above items made of thermocol and plastic which use plastic micro beads in the state. This notification comes into effect from the date of its publication in the Official Gazette.

### DIRECTION

1. No person including shopkeeper, vendor, wholesaler, retailer, trader, hawker or salesmen shall use plastic carry bags, plastic banners, plastic buntings, flex, plastic flags, plastic plates, plastic cups, plastic spoons, cling films and plastic sheets used for spreading on dining table irrespective of thickness including the above items made of thermocol and plastic which use plastic micro beads. Further, no industry or person shall manufacture, supply, store, transport, sale and/or distribute plastic carry bags, plastic banners, plastic buntings, flex, plastic flags, plastic plates, plastic cups, plastic spoons, cling films and plastic sheets used for spreading on

dining table irrespective of their thickness including the above items made of thermocol and plastic which use plastic micro beads in the State.

Provided that, the plastic used for the following purposes and circumstances are exempted from this notification;

a) The plastic carry bags manufactured exclusively for export purpose against any export orders in a plastic industry located in Special Economic Zone (SEZ) and Export Oriented Units (EOU).
b) The plastic bags which constitute or form an integral part of packaging in which goods are sealed prior to use at manufacturing/processing units.
c) The plastic bags and sheets used in Forestry and Horticulture nurseries against the orders from the Govt Departments or from the firms concerned.
d) The plastic used for packing of milk and milk products (dairy products).

2. That the following Officers shall enforce this direction in exercise of power conferred on them by law in their jurisdiction.
    a) The Commissioner, Joint Commissioners, Revenue Officers, all Health Officers and all Engineers of BBMP.
    b) All Deputy Commissioners of the districts.
    c) All Commissioners of City Corporations, Chief Officers, Health Officers and all Engineers of Urban Local Bodies.
    d) All Assistant Environmental Officers, Deputy Environmental Officers, Environmental Officers and Senior Environmental Officers of KSPCB.
    e) All Assistant Commissioners of Revenue Sub Divisions.
    f) Tahsildars of all Taluks.
    g) All officers of Commercial Tax Department.
    h) All officers of Department of Food and Civil supplies.
    i) The Controller, Deputy Controller and Regional Officers of Legal Metrology Department.
3. That the following officers shall take cognizance of offences and initiate legal action in case of noncompliance of this direction as per the powers conferred on them under section 19 of the Environment (Protection) Act, 1986 and to file complaint in the jurisdictional court of law on all violators.
    a) Secretary to Government (Ecology & Environment), Forest, Environment and Ecology Department.
    b) Chairman and Member Secretary, KSPCB.
    c) Deputy Commissioners of the Districts.
    d) Assistant Commissioners of Revenue Sub Divisions.
    e) Regional Officers of KSPCB.

**Explanation 1**- "Plastic" means any of the items mentioned in this direction made out of poly propylene (PP), non-woven poly propylene, multi layered co-extruder poly propylene, poly ethylene (PE), poly vinyl chloride (PVC), high and low density poly ethylene (HDPE & LDPE), poly styrene (PS) which is also called thermocol, poly amides (Nylon), poly terephthalate (PT), poly methyl methacrylate (PMM) and plastic micro beads.

**Explanation 2**- The word "carry bag" will have the same meaning that is provided in Rule 3 (b) of the Plastic Waste (Management and Handling) Rules, 2011. In this definition exemption is provided for plastic bag that constitute or form an integral part of packaging in which goods are sealed prior to use.

**Explanation 3**- Karnataka State Pollution Control Board shall be responsible for enforcement regarding the functions specified in clause (a) of Rule 4 of the Plastic Waste (Management and Handling) Rules, 2011 and Urban Local Bodies shall be responsible for enforcement regarding the functions specified in clause (b) of rule 4 of the said Rules;

**Explanation 4**- Officers as mentioned in Government of India's Notification No.S.O.394 (E) dated 16.04.1987 amended from time to time are authorized to file complaints against violation of directions included in this Notification under Section 19 of the Environment (Protection) Act, 1986.

By Order & in the name of the Governor of Karnataka,

**Mahendra Jain**
Additional Chief Secretary to Government,
Forest, Ecology and Environment Department

ಸರ್ಕಾರಿ ಮುದ್ರಣಾಲಯ, ವಿಕಾಸ ಸೌಧ ಘಟಕ, ಬೆಂಗಳೂರು (87) ೫೦೦ ಪ್ರತಿಗಳು)

# ಕೈಚೀಲಗಳು/Carry Bag

**BAN**



ಪ್ಲಾಸ್ಟಿಕ್ ಚೀಲಗಳು
**PLASTIC BAGS (polythene PE)**



ನೋನ್-ವೋವೆನ್ ಚೀಲಗಳು
**Polypropylene (PP) non-woven bags**

**ALTERNATIVE**

ಗ್ರಾಹಕರು ಸ್ವಂತ ಚೀಲ ತರುವುದು
**Bring Your Bag**



ಬಾಡಿಗೆ ಬ್ಯಾಗ್ **Borrow-A-Bag**





ಬಟ್ಟೆ / ಜೂಟ್ / ಕಾಗದ ಚೀಲಗಳು (ಬೆಲೆ ತೆರುವುದು)
**Paper/Cloth/Jute bags (chargeable)**

# ಕವರ್‌ಗಳು / Produce Bag

BAN






ತರಕಾರಿ ಹಾಕುವ ಕವರ್ ಗಳು Plastic Produce Bags (PE)

ALTERNATIVE

ಎಲ್ಲ ಒಂದೇ ಚೀಲದಲ್ಲಿ ಕೊಡುವುದು None



ಫ್ರಿಜ್ ಜಿಪ್ ಚೀಲಗಳು Fridge Mesh Bags



ಬಟ್ಟೆ ಪೌಚ್ Cloth produce bags



ಕಾಗದ ಕವರ್‌ಗಳು Paper produce bags



# ಲೋಟಗಳು / Glasses



ಪ್ಲಾಸ್ಟಿಕ್ ಲೋಟಗಳು
Plastic Glass(HDPE)



ತೆಳುವಾದ ಪ್ಲಾಸ್ಟಿಕ್ ಲೋಟಗಳು
Plastic cups (LDPE)



ಥರ್ಮೋಕಾಲ್
Styrofoam (PS) Glass



ಪ್ಲಾಸ್ಟಿಕ್ ಆವರಿಸಿದ ಪೇಪರ್ ಲೋಟಗಳು
Plastic-layered Paper Cups

**BAN**

ಸ್ಟೀಲ್/ಸಿರಾಮಿಕ್/ಮೆಲಮಿನ್ /ಗಾಜಿನ ಲೋಟಗಳು
Reusable glasses: Steel/ceramic/glass/melamine









ಮಣ್ಣಿನ ಲೋಟಗಳು
Clay kulhad





ಕಬ್ಬಿನ ತ್ಯಾಜ್ಯದಿಂದ ಮಾಡಿದ ಲೋಟಗಳು
Bagasse Glass*

**ALTERNATIVE**

# ತಟ್ಟೆಗಳು/Plates

## BAN



ಪ್ಲಾಸ್ಟಿಕ್
ತಟ್ಟೆಗಳು
**Plastic (PE) Plate**



ಥರ್ಮೋಕಾಲ್
ತಟ್ಟೆಗಳು
**Styrofoam(PS) Plate**



ಅಲ್ಯೂಮಿನಿಯಂ
ಹಾಳೆ ಆವರಿಸಿದ
ಪೇಪರ್ ತಟ್ಟೆಗಳು
**Foil Plate**



ಟೆಟ್ರಾ ಪ್ಯಾಕ್
ತಟ್ಟೆಗಳು
**Tetrapak Plate**



ಪ್ಲಾಸ್ಟಿಕ್ ಆವರಿಸಿದ
ಪೇಪರ್ ತಟ್ಟೆಗಳು
**Plastic coated paper Plate**

Multi-layered co-extruded heat-shrinkable, multilayer polyolefin packaging film

## ALTERNATIVE

ಸ್ಟೀಲ್/ಸಿರಾಮಿಕ್/ಮಲಮಿನ್
/ಗಾಜಿನ ತಟ್ಟೆಗಳು
**Reusable plates:**
**Steel/ceramic/glass/melamine**





ಬಾಳೆ ಎಲೆ
**Banana leaves**



ಮುತುಗದ ಎಲೆ
ತಟ್ಟೆಗಳು
**Leaf plates**



ಅಡಿಕೆ ಎಲೆ ತಟ್ಟೆಗಳು **Arecanut plates***





ಕಬ್ಬಿನ ತ್ಯಾಜ್ಯದಿಂದ ಮಾಡಿದ ತಟ್ಟೆಗಳು
**Sugarcane bagasse***

# ಬಟ್ಟಲು / Bowls

## BAN



ಪ್ಲಾಸ್ಟಿಕ್ ಬಟ್ಟಲು
**Plastic Bowl (LDPE)**



ಪ್ಲಾಸ್ಟಿಕ್ ಕಪ್ ಗಳು
**Plastic Cup (LDPE)**



ಥರ್ಮೋಕಾಲ್ ಬಟ್ಟಲು
**Styrofoam (PS)Bowl**

## ALTERNATIVE

ಸ್ಟೀಲ್/ಸಿರಾಮಿಕ್/ಮೆಲಮಿನ್ /ಗಾಜಿನ ಬಟ್ಟಲು
**Reusable bowls: Steel/ceramic/glass/melamine**







ದೊನ್ನೆ
**Leaf Donne**



ಅಡಿಕೆ ಎಲೆ ಬಟ್ಟಲು
**Arecanut Bowls***



ಕಬ್ಬಿನ ತ್ಯಾಜ್ಯದಿಂದ ಮಾಡಿದ ಬಟ್ಟಲು
**Bagasse Bowl***



# ಕಸದ ಕವರಗಳು/Garbage bags

**BAN**





ಕಸದ ಕವರ್ ಗಳು
**Garbage bags (including oxo-biodegradable) PE**

**ALTERNATIVE**

ಕಸವನ್ನು ನೇರವಾಗಿ ಡ್ರಮ್ಮಲ್ಲಿ ಹಾಕುವುದು
**Throw waste directly into the bin**



ಒಣ ಎಲೆ/ ಕೊಕೊಪೀಟ್
**Line with dry leaves/cocopeat**



Non-chlorinated bag (sanitary/biomedical aggregated waste)

ಪೇಪರ್ ಲೈನಿಂಗ್
**Paper lining**



# ಹಾಳೆ / Lining

## BAN



ಪ್ಲಾಸ್ಟಿಕ್ ಹಾಳೆಗಳು
**Plastic sheet on plate (PE)**




ಪ್ಲಾಸ್ಟಿಕ್ ರೋಲ್
**Plastic sheet on table (PE)**



ಪ್ಲಾಸ್ಟಿಕ್ ಕಚ್ಚಿಕೊ ಸುತ್ತು
**Clingwrap (PE)**

## ALTERNATIVE



ಬಾಳೆ ಎಲೆ ಲೈನಿಂಗ್
**Banana leaf lining on plate**



ಪೇಪರ್ ರೋಲ್
**Paper sheet on table**



**No wrap**

# ಪಾರ್ಸೆಲ್ / Food parcel

## BAN




ಪ್ಲಾಸ್ಟಿಕ್ ಕವರಗಳು
**Plastic/zip lock pouch (PE)**



ಫಾಯಿಲ್ ಕವರಗಳು
**Foil pouch**

ವಿಭಜನೆಗೊಂಡ ಪ್ಲಾಸ್ಟಿಕ್ ತಟ್ಟೆಗಳು
**Partitioned plastic plates with covers (LDPE)**





ಪ್ಲಾಸ್ಟಿಕ್ ಡಬ್ಬಗಳು
**Plastic containers (HDPE)**

## ALTERNATIVE

ಗ್ರಾಹಕರು ಸ್ವಂತ ಡಬ್ಬಗಳನ್ನು ತರುವುದು
**Get your own container**



ಅಲ್ಯೂಮಿನಿಯಂ ಹಾಳೆ/ಡಬ್ಬಗಳು
**Aluminium foil/foil container**





ಅಡಿಕೆ ಎಲೆ ಡಬ್ಬಗಳು
**Arecanut containers***





ಮಡಕೆ
**Clay pot**

ಪೇಪರ್/ರಟ್ಟಿನ ಡಬ್ಬಗಳು
**Paper/cardboard box**



ಕಬ್ಬಿನ ತ್ಯಾಜ್ಯದಿಂದ ಮಾಡಿದ ಡಬ್ಬಗಳು
**Sugarcane bagasse containers***



# ಬೇಕರಿ/Bakery

BAN





ಪ್ಲಾಸ್ಟಿಕ್ ಕವರಗಳು / Plastic pouches (PE)

ALTERNATIVE

ಗ್ರಾಹಕರು ಸ್ವಂತ ಡಬ್ಬಗಳನ್ನು ತರುವುದು

**Get your own container**




ಪೇಪರ್ ಪ್ಯಾಕೆಟ್/

**Paper packaging**





ಬಟರ್ ಪೇಪರ್ ಕವರಗಳು

**Butter paper pouches**



ಪೇಪರ್ ಹಾಳೆ

**Brown paper, Leaves**



# ಮಾಂಸ / Raw meat

Community Health Library and Information Centre
CPHE - SOCHARA
Koramangala
Bangalore - 34
(CLIC)
E-170
P16
15540

BAN



**Plastic pouch / cover (PE)**
ಪ್ಲಾಸ್ಟಿಕ್ ಕವರ್/ಚೀಲಗಳು

ALTERNATIVE

**Get your own container**
ಗ್ರಾಹಕರು ಸ್ವಂತ ಡಬ್ಬಗಳನ್ನು ತರುವುದು



**Aluminium foil /**
ಅಲ್ಯೂಮಿನಿಯಂ ಹಾಳೆ



**Banana leaf+paper**
ಬಾಳೆ ಎಲೆ ಹಾಗೂ ಪೇಪರಲ್ಲಿ ಸುತ್ತಿ ಕೊಡುವುದು




# ಚಮಚಗಳು/ Cutlery


BAN



**Plastic spoons/forks LDPE**
ಪ್ಲಾಸ್ಟಿಕ್ ಚಮಚಗಳು




**Plastic stirrers/chopsticks LDPE**
ಪ್ಲಾಸ್ಟಿಕ್ ಸ್ಟರರಗಳು/ಚೋಪ್ಸ್ಟಿಕಗಳು



**Plastic straws LDPE**
ಪ್ಲಾಸ್ಟಿಕ್ ಹುಲ್ಲುಗಳು

ALTERNATIVE


**Reusable cutlery: steel/melamine**
ಸ್ಟೀಲ್ / ಮೆಲಮಿನ್ ಚಮಚಾಗಳು






**Edible Spoons**
ಜೋವಾರ್ ಚಮಚಾಗಳು

**Wooden spoons/stirrers/chopsticks**
ಮರದ ಚಮಚಾಗಳು/ಸ್ಟರರಗಳು/ಚೋಪ್ಸ್ಟಿಕಗಳು



**No Straws / ಹುಲ್ಲುವಲ್ಲದೆ ಕುಡಿಯುವುದು**

**Steel/glass straws**
ಸ್ಟೀಲ್/ಗಾಜಿನ ಹುಲ್ಲುಗಳು



# ಧ್ವಜಗಳು,ಬ್ಯಾನರಗಳು / Flags,Banners

BAN



**Plastic flag PE**
ಪ್ಲಾಸ್ಟಿಕ್ ಧ್ವಜಗಳು




**Flex banner**
ಫ್ಲೆಕ್ಸ್ ಬ್ಯಾನರಗಳು



**Plastic Bunting**
ಪ್ಲಾಸ್ಟಿಕ್ ಬಂಟಿಂಗಗಳು

ALTERNATIVE

**Paper/Cloth Flags**
ಪೇಪರ್ / ಬಟ್ಟೆ ಧ್ವಜಗಳು



**Paper/Cloth Banners**
ಪೇಪರ್ / ಬಟ್ಟೆ ಬ್ಯಾನರಗಳು




**Paper/cloth buntings**
ಪೇಪರ್/ಬಟ್ಟೆ ಬಂಟಿಂಗಗಳು








SUPER MARKET




Naidu Biriyani

# Frequently Asked Questions (FAQs)
# ಪುನರಾವರ್ತಿತ ಪ್ರಶ್ನೆಗಳು (ಎಫ್‌ಎಕ್ಯೂ)

**Q1 : Why are you banning plastics?**

Due to increased use of plastics, a majority of them end up in garbage. 80% of garbage by volume is plastic. This gets burned in the open, affecting the air that we breathe leading to several breathing issues, skin issues and cancer. It also ends up in landfills leading to chemicals seeping in land affecting the water we drink. In order to protect the health of the residents of the ward, Government has decided to implement the ban on single-use plastic.

**೧: ನೀವೇಕೆ ಪ್ಲಾಸ್ಟಿಕ್ ಬ್ಯಾನ್ ಮಾಡಿದ್ದೀರಿ?**

ಪ್ಲಾಸ್ಟಿಕ್ ಬಳಕೆ ಜಾಸ್ತಿ ಆಗುತ್ತಿರುವುದರಿಂದ, ಪ್ಲಾಸ್ಟಿಕ್ ವಸ್ತುಗಳು ಬಹುತೇಕ ಕಸದಲ್ಲಿ ಕೊನೆಗೊಳ್ಳುತ್ತವೆ. ಒಟ್ಟು ಕಸದಲ್ಲಿ ಪ್ಲಾಸ್ಟಿಕ್ ಪರಿಮಾಣ ಶೇಕಡಾ ೮೦% ಆಗಿರುತ್ತದೆ. ಪ್ಲಾಸ್ಟಿಕ್ ಅನ್ನು ಸುಡುವುದರಿಂದ ವಾಯು ಮಾಲಿನ್ಯ ಉಂಟಾಗಿ ಹಲವಾರು ಉಸಿರಾಟದ ತೊಂದರೆಗಳು, ಚರ್ಮದ ಸಮಸ್ಯೆಗಳು ಹಾಗೂ ಕ್ಯಾನ್ಸರ್‌ಗೆ ಕಾರಣವಾಗುತ್ತದೆ. ಈ ಕಸ ನೆಲಭರ್ತಿಯಲ್ಲಿ ಸೇರಿ ರಾಸಾಯನಿಕ ಕ್ರಿಯೆಗೊಳಪಟ್ಟು ಅಂತರ್ಜಲವನ್ನು ಕಲುಷಿಗೊಳಿಸುತ್ತಿದೆ. ವಾರ್ಡ್ ನಿವಾಸಿಗಳ ಆರೋಗ್ಯ ರಕ್ಷಿಸುವ ಸಲುವಾಗಿ ಸರ್ಕಾರ ಬಳಕೆಯ ಪ್ಲಾಸ್ಟಿಕ್ ನಿಷೇಧ ಜಾರಿಗೆ ತಂದಿದೆ.

**Q2 : If the waste is segregated, the plastic can go for recycling, then why ban it?**

The market for recycling plastic has come down due to the reduction in oil prices resulting in virgin plastic being cheaper than recycled plastic. Due to fall in recycling market, more and more plastic is reaching land fills and creating a garbage menace for the authorities.

**೨: ತ್ಯಾಜ್ಯವನ್ನು ಪ್ರತ್ಯೇಕಿಸಲ್ಪಟ್ಟಾಗ, ಪ್ಲಾಸ್ಟಿಕ್ ಮರುಬಳಕೆಗೆ ಹೋಗಬಹುದಾದ್ದರಿಂದ ನಿಷೇಧ ಯಾಕೆ?**

ತೈಲ ಬೆಲೆಗಳಲ್ಲಿಯ ಕಡಿತದ ಫಲಿತಾಂಷವಾಗಿ ಮರುಬಳಕೆ ಮಾಡಿದ ಪ್ಲಾಸ್ಟಿಕ್‌ಗಿಂತಲೂ ಕಚ್ಚಾ ಪ್ಲಾಸ್ಟಿಕ್ ಬೆಲೆಯು ಅಗ್ಗವಾಗಿರುವ ಕಾರಣ ಪ್ಲಾಸ್ಟಿಕ್ ಮರುಬಳಕೆಯ ಮಾರುಕಟ್ಟೆಯು ಅವನತಿಯಾಗುತ್ತಿದೆ. ಮರುಬಳಕೆಯ ಮಾರುಕಟ್ಟೆಯು ಅವನತಿಯಾಗುತ್ತಿರುವ ಕಾರಣದಿಂದ ಹೆಚ್ಚು ಹೆಚ್ಚು ಪ್ಲಾಸ್ಟಿಕ್ ಲ್ಯಾಂಡ್ ಫಿಲ್ ಗೆ ಹೋಗುತ್ತಿದೆ ಮತ್ತು ನಿರ್ವಹಣಾಧಿಕಾರಿಗಳಿಗೆ ಸವಾಲಾಗಿದೆ.

**Q3 : Customers ask for carry bags. I don't want to lose business.**

When all the traders comply, the customer is forced to carry his own bag. Customers are also informed through public information. Shop-keepers also can let the customers know about the ban and request them to carry their own bags.

**೩: ಗ್ರಾಹಕರು ಚೀಲಗಳನ್ನು ಕೇಳಬಹುದು. ನಾನು ವ್ಯಾಪಾರ ಕಳೆದುಕೊಳ್ಳಲು ಬಯಸುವುದಿಲ್ಲ**

ಎಲ್ಲಾ ವ್ಯಾಪಾರಿಗಳು ಈ ನೀತಿಯನ್ನು ಅನುಸರಿಸಿದ್ದಲ್ಲಿ, ಗ್ರಾಹಕರು ಬಲವಂತವಾಗಿಯಾದರೂ ತಮ್ಮದೇ ಚೀಲಗಳನ್ನು ತರುತ್ತಾರೆ. ಗ್ರಾಹಕರು ಸಾರ್ವಜನಿಕ ಮಾಹಿತಿಯ ಮೂಲಕ ಮಾಹಿತಿ ಪಡೆಯುತ್ತಾರೆ. ಅಂಗಡಿಯವರು ಕೂಡಾ ಗ್ರಾಹಕರು ಪ್ಲಾಸ್ಟಿಕ್ ನಿಷೇಧದ ಬಗ್ಗೆ ತಿಳಿಯಲು ಬಿಡಬೇಕು ಮತ್ತು ಗ್ರಾಹಕರು ತಮ್ಮ ಚೀಲಗಳನ್ನು ತಾವೇ ತರಬೇಕೆಂದು ಮನವಿ ಮಾಡಿಬೇಕು.

**Q4 : What will I do with the stock of carry bags and other banned material I have?**

Wherever there is a return policy, please return the material. Rest have to be disposed off as dry waste. Any financial loss incurred on account of stock can be made up by the trader in form of savings in plastic bag spend in the subsequent months.

**೪: ಈಗಾಗಲೇ ನನ್ನಲ್ಲಿರುವ ಪ್ಲಾಸ್ಟಿಕ್ ಚೀಲಗಳು ಮತ್ತು ಇತರ ನಿಷೇಧಿತ ವಸ್ತುಗಳ ಸಂಗ್ರಹವನ್ನು ಏನು ಮಾಡಲಿ?**

ಎಲ್ಲೆಲ್ಲಿ ಮರಳಿ ಪಡೆಯುವ ನೀತಿ ಇದೆಯೋ, ದಯವಿಟ್ಟು ಅಲ್ಲಿ ವಸ್ತುಗಳನ್ನು ಮರಳಿಸಿ. ಉಳಿದ ಸಾಮಗ್ರಿಗಳನ್ನು ಒಣತ್ಯಾಜ್ಯ ವಿಲೆವಾರಿ ಮಾಡುವಂತೆ ಮಾಡುವುದು. ವಸ್ತುಗಳ ಸಂಗ್ರಹದ ಕಾರಣದ ಮೇಲೆ ಉಂಟಾದ ಯಾವುದೇ ಹಣಕಾಸಿನ/ಆರ್ಥಿಕ ನಷ್ಟವನ್ನು ಮುಂಬರುವ ತಿಂಗಳುಗಳಲ್ಲಿ ಪಾಸ್ಟಿಕ್ ವಿನಿಯೋಗಿಸಿದ/ಖರ್ಚು ಮಾಡಿದ ಚೀಲಗಳಲ್ಲಿಯ ಉಳಿತಾಯದ ಮಾದರಿಯಲ್ಲಿ ವ್ಯಾಪಾರಿಗಳ ಮೂಲಕ ಪಡೆಯಬಹುದು

**Q5 : Why plastic ban is applicable only in Karnataka?**

Karnataka Government has taken this decision considering the environmental hazard. It is only a question of time that the ban will become applicable nation-wide too.

**೫: ಪ್ಲಾಸ್ಟಿಕ್ ನಿಷೇಧವು ಕರ್ನಾಟಕದಲ್ಲಿ ಮಾತ್ರ ಯಾಕೆ ಅನ್ವಯವಾಗುತ್ತದೆ?**

ಕರ್ನಾಟಕ ಸರ್ಕಾರವು, ಪರಿಸರಕ್ಕೆ ಆಗುತ್ತಿರುವ ಅಪಾಯಗಳನ್ನು ಪರಿಗಣಿಸಿ ಪ್ಲಾಸ್ಟಿಕ್ ನಿಷೇಧ ನಿರ್ಧಾರ ತೆಗೆದುಕೊಂಡಿದೆ. ಇದು ಕೇವಲ ಒಂದು ಸಮಯದ ಪ್ರಶ್ನೆಯಾಗಿದ್ದು, ಪ್ಲಾಸ್ಟಿಕ್ ನಿಷೇಧವು ರಾಷ್ಟ್ರವ್ಯಾಪಿ ಅನ್ವಯವಾಗುತ್ತದೆ.

**Q6 : Is plastic above 40 microns allowed?**

As per the Karnataka State notification on ban of single use plastic, plastic of all microns thickness are banned.

**೬: 40 ಮೈಕ್ರಾನ್ಸ್‌ಗಿಂತ ಹೆಚ್ಚಿರುವ ಪ್ಲಾಸ್ಟಿಕ್ ಬಳಕೆಗೆ ಅನುಮತಿಯಿದೆಯಾ?**

ಕರ್ನಾಟಕ ರಾಜ್ಯ ಸರ್ಕಾರದ ಪ್ಲಾಸ್ಟಿಕ್ ನಿಷೇಧದ ಅಧಿಸೂಚನೆಯಂತೆ ಏಕ-ಬಳಕೆಯ ಪ್ಲಾಸ್ಟಿಕ್, ಎಲ್ಲಾ ದಪ್ಪ ಪ್ಲಾಸ್ಟಿಕ್‌ನ ಎಲ್ಲ ಮೈಕ್ರಾನ್‌ಗಳು ನಿಷೇಧಿಸಲ್ಪಟ್ಟಿವೆ.

**Q7 : How will I pack atta or other grocery?**

Paper covers of 60gsm or greater thickness, can be used to pack if the customer does not carry own small bags to pack grocery

**೭: ಹಿಟ್ಟು ಮತ್ತು ಇತರೆ ಕಿರಾಣಿ ಸಾಮಗ್ರಿಗಳನ್ನು ನಾನು ಹೇಗೆ ಕಟ್ಟಿ ಕೊಡಲಿ/ಪ್ಯಾಕ್ ಮಾಡಲಿ?**

ಗ್ರಾಹಕರು ಕಿರಾಣಿ ಸಾಮಗ್ರಿಗಳನ್ನು ಕೊಂಡೊಯಲು ತಮ್ಮದೇ ಚಿಕ್ಕ ಚೀಲಗಳನ್ನು ಜೊತೆಯಲ್ಲಿ ತರದೇ ಇದ್ದಲ್ಲಿ, 60 ಗ್ರಾಮ್ ಅಥವಾ ಅದಕ್ಕಿಂತಲೂ ಹೆಚ್ಚಿಗೆ ದಪ್ಪಗಿರುವ ಕಾಗದದ ಕವರ್‌ಗಳನ್ನು ಪ್ಯಾಕ್ ಮಾಡಲು ಉಪಯೋಗಿಸಬಹುದು.

**Q8 : I have oily greasy food product I sell. I need to pack in plastic. What is the alternative?**

There are butter paper packets that are available and it can be packed in those packets but cannot be stored. So store them in drums / large airtight containers and pack as needed in smaller packets.

**೮: ನಾನು, ಎಣ್ಣೆಯುಕ್ತ ಜಿಡ್ಡಿನ ಆಹಾರ ಉತ್ಪನ್ನಗಳನ್ನು ಮಾರಾಟ ಮಾಡುತ್ತೇನೆ. ಇವುಗಳನ್ನು ನಾನು ಪ್ಲಾಸ್ಟಿಕ್ ನಲ್ಲಿಯೇ ಪ್ಯಾಕ್ ಮಾಡಬೇಕು. ಹಾಗಾಗಿ ಇವುಗಳನ್ನು ಪ್ಯಾಕ್ ಮಾಡಲು ಪರ್ಯಾಯ ವ್ಯವಸ್ಥೆ ಏನು?**

ಬೆಣ್ಣೆ ಕಾಗದದ ಪೊಟ್ಟಣಗಳ ಲಭ್ಯ ಇವೆ ಮತ್ತು ಎಣ್ಣೆಯುಕ್ತ ಜಿಡ್ಡಿನ ಆಹಾರ ಉತ್ಪನ್ನಗಳನ್ನು ಅವುಗಳಲ್ಲಿ ಪ್ಯಾಕ್ ಮಾಡಬಹುದು, ಆದರೆ ಇದನ್ನು ಸಂಗ್ರಹಿಸಿಡಲು ಸಾಧ್ಯವಿಲ್ಲ. ಆದ್ದರಿಂದ ಇವುಗಳನ್ನು ಡ್ರಮ್‌ಗಳಲ್ಲಿ /ಗಾಳಿಯಾಡದ ದೊಡ್ಡ ಡಬ್ಬಿಗಳಲ್ಲಿ ಸಂಗ್ರಹಿಸುವುದು ಮತ್ತು ಅಗತ್ಯಕ್ಕೆ ತಕ್ಕಂತೆ ಸಣ್ಣ ಪ್ಯಾಕೆಟ್‌ಗಳಲ್ಲಿ ಪ್ಯಾಕ್ ಮಾಡುವುದು.

**Q9: How does the Borrow a bag work?**

The traders purchase cloth bags and rent it out to their customer at an agreed price. When the customer returns the bag, the trader refunds the money to the customer. This is to ensure that there are no disposables used when the customer misses to bring their own bag.

**೯: ಸಾಲ ಚೀಲ ಹೇಗೆ ಕೊಡುವುದು**

ವ್ಯಾಪಾರಿಗಳು ಬಟ್ಟೆಯ ಚೀಲಗಳನ್ನು ಖರೀದಿಸಿ/ಕೊಂಡುಕೊಳ್ಳುವುದು ಮತ್ತು ಅದನ್ನು ತಮ್ಮ ಗ್ರಾಹಕರಿಗೆ ಒಂದು ಒಪ್ಪಿಗೆಯ ಬೆಲೆಯಲ್ಲಿ ಬಾಡಿಗೆಗೆ ಕೊಡುವುದು. ಗ್ರಾಹಕರು ಬಾಡಿಗೆ ಪಡೆದ ಚೀಲವನ್ನು ಹಿಂತಿರುಗಿಸಿದಾಗ, ವ್ಯಾಪಾರಿಯು ಗ್ರಾಹಕರಿಗೆ ಹಣವನ್ನು ಮರುಪಾವತಿಸುವುದು/ಹಿಂತಿರುಗಿಸುವುದು.. ಇದರಿಂದ ಗ್ರಾಹಕರು ತಮ್ಮ ಚೀಲವನ್ನು ತರಲು ಮರೆತಾಗ ಅವರು ಬಳಸಿ ಎಸೆಯಬಹುದಾದ ಪ್ಲಾಸ್ಟಿಕಗಳ ಬಳಕೆ ಮಾಡುತ್ತಿಲ್ಲ ಎಂಬುದು ಖಚಿತವಾಗುತ್ತದೆ.

**Q10 : Where do I find alternatives?**

Wholesale markets that used to stock plastic disposables are now flooded with alternatives.

**೧೦: ಪ್ಲಾಸ್ಟಿಕ್‌ಗೆ ಪರ್ಯಾಯಗಳನ್ನು ನಾನು ಎಲ್ಲಿ ಹುಡುಕಲಿ?**

ಎಸೆಯಬಹುದಾದ/ಬಿಸಾಡಬಹುದಾದ ಪ್ಲಾಸ್ಟಿಕ್ ಸಂಗ್ರಹಗಳನ್ನಿಡುವ ಸಗಟು ಮಾರುಕಟ್ಟೆಗಳು ಈಗ ಪರ್ಯಾಗಳಿಂದ ಈಗ ತುಂಬಿವೆ.

**Q11 : What do I do for take-away food and drinks?**

Take-away food needs to be packed in containers if the customer has brought them. Else, need to be packed using alternative packaging such as leaf and paper combination, aluminium packing containers, aluminium foil, sugarcane bagasse cups, arecanut boxes etc.

**೧೧: ಆಹಾರ ಮತ್ತು ಪಾನೀಯಗಳನ್ನು ಹೊರಗಡೆ ಹೇಗೆ ಕೊಂಡೊಯ್ಯುವುದು?**

ಗ್ರಾಹಕರು ತಮ್ಮೊಂದಿಗೆ ತಂದಿರುವ ಪಾತ್ರೆಗಳಲ್ಲಿ ಅಥವಾ ಕಂಟೇನರ್‌ಗಳಲ್ಲಿ ಆಹಾರ ಮತ್ತು ಪಾನೀಯಗಳನ್ನು ಹಾಕಿ ಕೊಡುವುದು. ಅಲ್ಲದಿದ್ದರೆ, ಎಲೆ ಮತ್ತು ಕಾಗದದ ಸಂಯೋಜನೆ, ಪ್ಯಾಕ್ ಮಾಡಲು ಬಳಸುವ ಅಲ್ಯೂಮಿನಿಯಮ್ ಧಾರಕಗಳು/ಕಂಟೇನರ್‌ಗಳು, ಅಲ್ಯೂಮಿನಿಯಮ್ ಹಾಳೆಗಳು, ಕಬ್ಬು ತಯಾರಿಕೆಯ ಸಮಯದಲ್ಲಿ ಉಳಿದ ಒಣ ತಿರುಳಿನಿಂದ ತಯಾರಿಸಿದ ಕಪ್‌ಗಳು, ಅಡಿಕೆ ಪೆಟ್ಟಿಗೆಯಂತಹ ಇತ್ಯಾದಿಗಳನ್ನು ಆಹಾರ ಮತ್ತು ಪಾನೀಯಗಳ ಪ್ಯಾಕ್‌ಗಾಗಿ ಬಳಸುವ ಅಗತ್ಯವಿದೆ.

**Q12 : Can I finish the stock of plastic or other banned items that I have?**

No. The Government Order is effective from March 11th, 2016.

**೧೨: ನಾನು ನನ್ನಲ್ಲಿರುವ ಪ್ಲಾಸ್ಟಿಕ್ ಅಥವಾ ಇತರೆ ನಿಷೇಧಿತ ವಸ್ತುಗಳ ಸಂಗ್ರಹಗಳನ್ನು ಬಳಕೆ ಮಾಡಿ ಮುಗಿಸಬಹುದೆ?**

ಇಲ್ಲ. ೧೧ನೇ ಮಾರ್ಚ್, ೨೦೧೬ ರಿಂದಲೇ ಸರ್ಕಾರದ ಆದೇಶ/ಅಧಿಸೂಚನೆಯು ಜಾರಿಯಲ್ಲಿ ಇರುತ್ತದೆ.

**Q13 : I deal with disposable plastic / paper / Styrofoam plates and glasses, cups, etc. What do I do?**

Return the stock. Switch to alternative products and we can promote the wholesaler to other traders.

**೧೩: ನಾನು ಬಳಸಿ ಎಸೆಯಬಹುದಾದ ಪಾಸ್ಟಿಕ್/ಕಾಗದ/ಸ್ಟೈರೋಫಾಮ್ ಪ್ಲೇಟ್‌ಗಳು ಮತ್ತು ಗ್ಲಾಸ್‌ಗಳು, ಕಪ್‌ಗಳು ಇತರೆ ವಸ್ತುಗಳ ವ್ಯವಹಾರ ಮಾಡುತ್ತೇನೆ.? ಈಗ ಅವುಗಳನ್ನು ಏನು ಮಾಡಲಿ?**

ದಾಸ್ತಾನನ್ನು ಹಿಂತಿರುಗಿಸುವುದು. ಪರ್ಯಾಯ ಉತ್ಪನ್ನಗಳ ಬಳಕೆ/ಮಾರಾಟಕ್ಕೆ ಬದಲಿಸಿಕೊಳ್ಳುವುದು ಮತ್ತು ಸಗಟು ವ್ಯಾಪಾರಿಗಳಿಂದ ಇತರ ವ್ಯಾಪಾರಿಗಳಿಗೆ ನಾವು ಪ್ರಚಾರ ಮಾಡಬಹುದು.

**Q14 : Instead of asking us to stop using plastic, close down the factories that produce.**

Manufacturing single-use plastic is not allowed in the state and authorities will ensure the factories are inspected to ensure compliance. If demand reduces, people will anyways switch to producing eco-friendly products.

**೧೪: ಪ್ಲಾಸ್ಟಿಕ್ ಬಳಕೆಯನ್ನು ನಿಲ್ಲಿಸುವಂತೆ ನಮಗೆ ಹೇಳುವ ಬದಲಿಗೆ, ಪ್ಲಾಸ್ಟಿಕ್ ಉತ್ಪಾದಿಸುವ ಕಾರ್ಖಾನೆಗಳನ್ನು ಮುಚ್ಚಬಹುದಲ್ಲವೇ?**

ರಾಜ್ಯದಲ್ಲಿ ಏಕ ಬಳಕೆಯ ಪ್ಲಾಸ್ಟಿಕ್‌ನ ಉತ್ಪಾದಾದನೆ/ತಯಾರಿಕೆಗೆ ಅನುಮತಿ ಇಲ್ಲ. ಅಧಿಕಾರಿಗಳು ಕಾರ್ಖಾನೆಗಳ ಅನುಸರಣೆಯನ್ನು ಖಚಿತಪಡಿಸಿಕೊಳ್ಳಲು ತಪಾಸಣೆಗೆ ಒಳಪಡಿಲಾಗುವದೆಂದು ಖಚಿತಪಡಿಸಿಕೊಳ್ಳಬಹುದು. ಒಂದು ವೇಳೆ ಬೇಡಿಕೆ ಕಡಿಮೆಯಾದಲ್ಲಿ, ಜನರು ಹೇಗಾದರೂ ಪರಿಸರ-ಸ್ನೇಹಿ ಉತ್ಪನ್ನಗಳ ತಯಾರಿಕೆಯಲ್ಲಿ ತಮ್ಮನ್ನು ತೊಡಗಿಸಿಕೊಂಡು ಅಭ್ಯಾಸವನ್ನು ಬದಲಾಯಿಸಿಕೊಳ್ಳುತ್ತಾರೆ.

**Q15 : Milk is sold in plastic, atta etc., comes in plastic. What about them?**

Dairy products are exempt from the ban. Pre-packaged goods are not banned for now. Govt has given 2 years' time to these products to adopt EPR (Extended Producers Responsibility) wherein they become responsible of processing the packaging they release in the market.

**೧೫: ಹಾಲಿನ ಉತ್ಪನ್ನಗಳು ಪಾಸ್ಟಿಕ್‌ನಲ್ಲಿಯೇ ಮಾರಾಟವಾಗುತ್ತವೆ. ಹಾಗದರೆ ಅವುಗಳ ಬಗ್ಗೆ ಏನು ಮಾಡುವುದು?**

ಡೈರಿ ಉತ್ಪನ್ನಗಳಿಗೆ ನಿಷೇಧದಿಂದ ವಿನಾಯತಿ ಇದೆ. ಈಗಾಗಲೇ ಪ್ಯಾಕ್ ಮಾಡಲ್ಪಟ್ಟ ಸರಕು/ವಸ್ತುಗಳಿಗೆ ಸಧ್ಯದಲ್ಲಿ ನಿಷೇಧ ಇರುವುದಿಲ್ಲ. ಸರ್ಕಾರವು ಈ ಉತ್ಪನ್ನಗಳಿಗೆ EPR (ವಿಸ್ತೃತ/ವಿಸ್ತರಣೆಗೊಂಡ ಉತ್ಪಾದಕರ ಜವಾಬ್ದಾರಿ [Extended Producers Responsibility]) ಅಳವಡಿಸಿಕೊಳ್ಳಲು ಎರಡು ವರ್ಷಗಳ ಅವಧಿಯನ್ನು ನೀಡಿದೆ. ಈ ಅವಧಿಯಲ್ಲಿವ ಅವರು ಮಾರುಕಟ್ಟೆಯಲ್ಲಿ ಬಿಡುಗಡೆ ಮಾಡುವ ಉತ್ಪನ್ನಗಳ ಪ್ಯಾಕ್ ಮಾಡುವ ಪ್ರಕ್ರಿಯೆಗೆ ಅವರೇ ಜವಾಬ್ದಾರರಾಗಿರುತ್ತಾರೆ.

**Q16 : When I give a biryani take-away isn't it considered pre-packed?**

No. Pre-packing is clearly defined as packing in manufacturing/processing unit and not at retail point

**೧೬: ನಾನು ಬಿರಿಯಾನಿಯನ್ನು ಹೊರಗಡೆ ಕೊಡುವಾಗ ಪ್ಯಾಕ್ ಮಾಡಿರುವುದನ್ನು ಈಗಾಲೇ ಪ್ಯಾಕ್ ಮಡಲ್ಪಟ್ಟದ್ದೆಂದು ಪರಿಗಣಿಸಲಾಗುವುದೇ?**

ಇಲ್ಲ. ಪೂರ್ವ ಪ್ಯಾಕಿಂಗ್‌ಅನ್ನು ಉತ್ಪಾದನಾ/ಸಂಸ್ಕರಣಾ ಘಟಕದಲ್ಲಿಯ ಪ್ಯಾಕಿಂಗ್ ಎಂದು ಸ್ಪಷ್ಟವಾಗಿ ಉಲ್ಲೇಖಿಸಲ್ಪಟ್ಟಿದೆ/ ವ್ಯಾಖ್ಯಾನಿಸಲಾಗಿದೆ, ಚಿಲ್ಲರೆ ಕೇಂದ್ರದಲ್ಲಿ ಪ್ಯಾಕ್ ಮಾಡಿರುವುದು ಅಲ್ಲ.

# SUPPORTED BY

Department of Forest Ecology and Environment
Government of Karnataka

ಅರಣ್ಯ ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ

ಕರ್ನಾಟಕ ಸರ್ಕಾರ

Environmental Management and Policy
Research Institute, Bangalore

ಪರಿಸರ ನಿರ್ವಹಣೆ ಮತ್ತು ನೀತಿ

ಸಂಶೋಧನಾ ಸಂಸ್ಥೆ, ಬೆಂಗಳೂರು

## Prepared by

ಬೆಂಗಳೂರು ಎಕೋ ಟೀಮ್
BANGALORE ECO TEAM

blrecoteam@gmail.com

"Hasiru Bhavana", Doresanipalya Forest Campus, Vinayakanagar Circle, JP Nagar 5th Phase, Bangalore-560078
Website: www.karnataka.gov.in/empri; E-mail: empri.blr@gmail.com: empri.training@gmail.comPh: 080-26490746/47